

ಸಿದ್ಧಿಸಿಕೊಳ್ಳಲು ತಾಳ್ಮೆ ಅತ್ಯಗತ್ಯ. ಬಣ್ಣದ ಮಡಚಿದ ಕಾಗದಗಳನ್ನು ನಿರ್ದಿಷ್ಟವಾಗಿ, ಕಲ್ಪನೆಗೆ ತಕ್ಕಂತೆ ಜೋಡಿಸುವುದು ಯುನಿಟ್ ಓರಿಗಾಮಿ ಕಲೆಯ ವೈಶಿಷ್ಟ್ಯ.

ಸಣ್ಣಪುಟ್ಟ ಕೃತಿಗಳನ್ನು ಸೃಜಿಸಲು ನೂರಾರು ಮಡಚಿದ ಕಾಗದಗಳ ಅಗತ್ಯವಿದ್ದು, ದೊಡ್ಡ ಕೃತಿಗಳಿಗೆ ನಿರ್ದಿಷ್ಟ ಅಳತೆ, ಆಕಾರಗಳ ಮಡಚಿದ ಕಾಗದ ಚೂರುಗಳ ಅಗತ್ಯ ಇನ್ನೂ ಹೆಚ್ಚಿರುತ್ತದೆ.

ಕಲಾಕೃತಿಯ ಯಾವುದೇ ಭಾಗವನ್ನು ರೂಪಿಸಲು ಅದಕ್ಕೆ ಅಗತ್ಯ ಅಳತೆ, ಆಕಾರದ ಬಣ್ಣ ಬಣ್ಣಗಳ ಮಡಿಕೆ ಕಾಗದಗಳನ್ನು ಎಚ್ಚರಿಕೆಯಿಂದ ಜೋಡಿಸಿದರೆ ಮಾತ್ರ ಅಂದುಕೊಂಡ ಕಲಾಕೃತಿ ಅನಾವರಣವಾಗಲು ಸಾಧ್ಯ. ಕಲಾಕಾರರ ಪರಿಕಲ್ಪನೆ ಹಾಗೂ ಕೈಚಳಕದಿಂದ ಮಾತ್ರ ಯುನಿಟ್ ಓರಿಗಾಮಿ ಕೃತಿ ಸುಂದರವಾಗಿ ಸಿದ್ಧಗೊಳ್ಳುತ್ತದೆ.

ಅಂಟಿನ ನಂಟಿಲ್ಲದೆ ನೂರಾರು ಮಡಚಿದ ಕಾಗದ ಚೂರುಗಳನ್ನು ಮುಕ್ಕಾಗದಂತೆ ಒಂದರೊಳಗೊಂದರಂತೆ ಜೋಡಿಸಿಟ್ಟು ಬಂಧಿಸುತ್ತ ನಿಗದಿತ ಕಲಾಕೃತಿಗಳನ್ನು ಅರಳಿಸುವ ಕೆಲಸ ಸಾಗಬೇಕು.

ತಮ್ಮ ಅಜ್ಜಿ ನಿವೃತ್ತ ಶಿಕ್ಷಕಿ ಸೀತಮ್ಮನವರಿಂದ ಯುನಿಟ್ ಓರಿಗಾಮಿ ಕಲೆಯನ್ನು ಬಳುವಳಿಯಾಗಿ ಪಡೆದ ಶುಭಂಕರಿ ಅವರು ಹತ್ತು ವರ್ಷಗಳ ನಿರಂತರ ಕಲಿಕೆಯ ಬಳಿಕ ಇದೀಗ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಕಾರ್ಟೂನು,



ಕ್ಯಾರಿಕೇಚರ್‌ಗಳನ್ನು ಯುನಿಟ್ ಓರಿಗಾಮಿ ಕರಕುಶಲ ಕಲೆಯಲ್ಲಿ ಸಾಧ್ಯವಾಗಿಸಿದ್ದಾರೆ.

ವಾಸ್ತುಶಿಲ್ಪಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿರುವ ಅವರು ಕಾಗದ ಬಳಸಿ ಶಿಲ್ಪ ರಚಿಸುವುದರಲ್ಲೂ ಯಶ ಕಂಡಿದ್ದು, ಯುನಿಟ್ ಓರಿಗಾಮಿಯಲ್ಲೇ ವಿಭಿನ್ನ ಶೈಲಿಯನ್ನು ಸಾದರಪಡಿಸುವತ್ತ ಹೆಜ್ಜೆ ಇಟ್ಟಿದ್ದಾರೆ. ಶುಭಂಕರಿ ಅವರ ಈ ಪ್ರಯತ್ನಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ ಅವರ ತಂದೆ ವೆಂಕಟೇಶ ಶಾಸ್ತ್ರೀ.

ಕಲಾವಿದನ ಕಲ್ಪನೆಯಲ್ಲಿ ಮಡಚು ಕಾಗದದ ಚೂರುಗಳನ್ನು ಜೋಡಿಸಿ ಕಾಮನಬಿಲ್ಲಿನ ಬಣ್ಣಗಳನ್ನು ರಂಗಿಲ್ಲದೆ, ಬಣ್ಣದ ಕಾಗದದ ಚೂರುಗಳಿಂದಲೇ ಚಿಮುಕಿಸುವಂತಹ ಚಿತ್ತಾಕರ್ಷಕ ಕಲೆ ಸಾಕಾರಗೊಳ್ಳುವುದು ಓರಿಗಾಮಿ ಯುನಿಟ್ ಕಲಾಕೃತಿಗಳಲ್ಲಿ. ಈ ಕಲಾಪ್ರಕಾರವನ್ನೇ ತಮ್ಮ ಸೃಜನಶೀಲತೆಗೆ ಒಗ್ಗಿಸಿಕೊಂಡವರು ಶುಭಂಕರಿ.



ಜಪಾನಿ ಹಬ್ಬದಲ್ಲಿ ಭಾಗವಹಿಸುವ ಶುಭಂಕರಿ ಶಾಸ್ತ್ರೀ ಅವರ ಕೃತಿಗಳಿಗೆ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಅನೇಕ ಗೌರವ ಪುರಸ್ಕಾರಗಳು ಸಂದಿವೆ. ಓರಿಗಾಮಿಯಲ್ಲಿ ಸುಂದರ ರಮಣೀಯ ಚಿತ್ತಾರಗಳನ್ನು ಅನಾವರಣಗೊಳಿಸುತ್ತಾ, ಮತ್ತಷ್ಟು ಮಗದಷ್ಟು ಸಾಧ್ಯತೆಗಳನ್ನು ಅನ್ವೇಷಿಸುತ್ತಿದ್ದಾರೆ ಅವರು.

ಪ್ರತಿಕ್ರಿಯಿಸಿ: feedback@sudha.co.in


